For more job news visit : www.kpscvaani.com

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

KSIIDC

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

"ವಿನಿಜ ಭವನ", 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560001 ದೂ.: 080-22258131-32-33,

ಇ-ಮೇಲ್: murthy.ksiidc@gmail.com / info@ksiidc.com ವೆಬ್‌ಸೈಟ್: www.ksiidc.karnataka.gov.in

ಗುತ್ತಿಗೆ ಆಧಾರದ ಮೇಲೆ ಭೂ ಸಲಹೆಗಾರರ ನೇಮಕಾತಿಗಾಗಿ ಅಧಿಸೂಚನೆ

ಕರ್ನಾಟಕ ಸರ್ಕಾರದ ಪ್ರಮುಖ ಮೂಲಸೌಲಭ್ಯ ಅಭಿವೃದ್ಧಿ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ರಾಜ್ಯದಲ್ಲಿ ವಿಮಾನ ನಿಲ್ದಾಣಗಳು ಹಾಗು ಇತರೆ ಮೂಲಸೌಲಭ್ಯ ಯೋಜನೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ನೋಡಲ್ ಏಜೆನ್ಸಿಯಾಗಿರುವ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯು, ಗುತ್ತಿಗೆ ಆಧಾರದ ಮೇಲೆ ಕೆಳಕಂಡ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ ಸಂ.	ಹುದ್ದೆಯ ಹೆಸರು	ಅರ್ಹತೆ ಮತ್ತು ಅನುಭವ	ಮಾಸಿಕ ಒಟ್ಟು ಸಂಭಾವನೆ	ವಯೋಮಿತಿ
1	ಭೂ ಸಲಹೆಗಾರ (ಗುತ್ತಿಗೆ ಆಧಾರದ ಮೇಲೆ). ಒಂದು (1) ಹುದ್ದೆ	ಕಂದಾಯ / ಭೂಮಾಪನ ಇಲಾಖೆಯಿಂದ ನಿವೃತ್ತರಾದ ಡೆಪ್ಯೂಟಿ ತಹಸಿಲ್ದಾರ್/ ತಹಸಿಲ್ದಾರ್ ಶ್ರೇಣಿಯ ಅಧಿಕಾರಿಗಳು ಮತ್ತು ನಿವೃತ್ತ ವಿಶೇಷ ಭೂಸ್ವಾಧೀನಾಧಿಕಾರಿಗಳು. ಭೂ ಆಡಳಿತ, ಭೂಸ್ವಾಧೀನ, ಕಂದಾಯ ವಿಷಯಗಳು, ಸರ್ವೇ ಕಾರ್ಯಾಚರಣೆಗಳು ಮತ್ತು ಸಂಬಂಧಿತ ಸರ್ಕಾರಿ ಕಾರ್ಯವಿಧಾನಗಳಲ್ಲಿ ವ್ಯಾಪಕ ಅನುಭವ ಹೊಂದಿರಬೇಕು. ಕನ್ನಡ ಭಾಷೆಯ ಜ್ಞಾನ (ಮಾತನಾಡುವುದು, ಓದುವುದು ಮತ್ತು ಬರೆಯುವುದು ಸೇರಿದಂತೆ) ಅತ್ಯಗತ್ಯ	ರೂ.1,17,040/-	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ 65 ವರ್ಷಗಳನ್ನು ಮೀರಬಾರದು.

ಸಾಮಾನ್ಯ ಸೂಚನೆಗಳು:

1) ಭೂ ಸಲಹೆಗಾರ ಹುದ್ದೆಯ ನೇಮಕಾತಿಯು ಆರಂಭದಲ್ಲಿ ಒಂದು (01) ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಇರುತ್ತದೆ. ನಿಗಮದ ಅಗತ್ಯತೆಗಳು ಮತ್ತು ಅಭ್ಯರ್ಥಿಯ ಕಾರ್ಯಕ್ಷಮತೆಯ ಆಧಾರದ ಮೇಲೆ ಒಪ್ಪಂದವನ್ನು ವಿಸ್ತರಿಸಬಹುದು.

2) ಆಯ್ಕೆಯ ವಿಧಾನವು ಶೈಕ್ಷಣಿಕ ಅರ್ಹತೆಗಳು, ಸಂಬಂಧಿತ ಅನುಭವ ಮತ್ತು ಸಂದರ್ಶನದಲ್ಲಿನ ಕಾರ್ಯಕ್ಷಮತೆಯ ಆಧಾರದ ಮೇಲೆ ಇರುತ್ತದೆ.

3) ಆಸಕ್ತ ಅಭ್ಯರ್ಥಿಗಳು ತಮ್ಮ ರೆಸ್ಯೂಮ್ ಜೊತೆಗೆ ನಿವೃತ್ತಿಯ ಪುರಾವೆ, ಶೈಕ್ಷಣಿಕ ಅರ್ಹತೆ ಮತ್ತು ಅನುಭವದ ಪ್ರಮಾಣಪತ್ರಗಳ ಪ್ರತಿಗಳನ್ನು ಶೀಘ್ರ ಅಂಚೆ(ಸ್ಪೀಡ್ ಪೋಸ್ಟ್) ಮೂಲಕ ಅಥವಾ ಖುದ್ದಾಗಿ ಮೇಲಿನ ವಿಳಾಸದಲ್ಲಿರುವ ಉಪ ಪ್ರಧಾನ ವ್ಯವಸ್ಥಾಪಕರು (ಪಿ&ಎ) ಕೆಎಸ್‌ಐಐಡಿಸಿ ರವರಿಗೆ ಸಲ್ಲಿಸಬೇಕಾಗುತ್ತದೆ.

4) ಅರ್ಜಿಗಳು ಈ ಅಧಿಸೂಚನೆ ಪ್ರಕಟವಾದ **ದಿನಾಂಕದಿಂದ 15 ದಿನಗಳ** ಒಳಗಾಗಿ ತಲುಪಬೇಕು. ಸಂದರ್ಶನದ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು

5) ಯಾವುದೇ ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಉಪ ಪ್ರಧಾನ ವ್ಯವಸ್ಥಾಪಕರು ಅವರನ್ನು ಸಂಪರ್ಕಿಸುವುದು (ಮೊ: 98458-33566)

6) ನಿಗಮವು ಅಪೂರ್ಣಗೊಂಡಿರುವ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು